# Sri Vijayadasara Devaranamagalu

ರಾಗ – ಕಾಂಬೋದಿ    ತಾಳ – ಝಂಪೆ



ನಿನ್ನ ದರುಶನಕೆ ಬಂದವನಲ್ಲವೋ ।
ಪುಣ್ಯವಂತರ ದಿವ್ಯಚರಣ ನೋಡಲಿ ಬಂದೆ । ಪ ।

ಎಲ್ಲೆಲ್ಲಿ ನಿನ್ನ ವ್ಯಾಪ್ತತನವಿರಲಿಕ್ಕೆ ।
ಇಲ್ಲಿಗೆ ಬರುವ ಕಾರಣವಾವುದೋ ।
ಸೊಲ್ಲಿಗೆ ಕಂಭದಿ ತೋರಿದ ಮಹಾಮಹಿಮ ।
ಅಲ್ಲಿ ಇಲ್ಲೇನಯ್ಯ ಬಲ್ಲ ಭಜಕರಿಗೆ । ೧ ।

ಕರೆದಾಗಲೇ ಓಡಿ ಬಂದೊದಗುವ ಸ್ವಾಮಿ ।
ಮರಳಿ ಗಾವುದವೆಣಿಸಿ ಬರಲ್ಯಾತಕೊ ।
ನೆರೆನಂಬಿದವರಿಗೆ ಆವಲ್ಲಿಯಾದರೆ ಏನು ।
ಅರಿದವರ ಮನದೊಳಗೆ ನಿಂದಾಡುವ ಚೆಂದವ । ೨ ।

ಕಠಿಣವೋ ನಿನ್ನ ಭಕುತರನ ನೋಡುವ ಲಾಭ ।
ಸೆಟೆಯಲ್ಲ ವೇದಗಳು ಸಾರುತಿವೆಯೋ ।
ವಟು ಮೊದಲಾದ ವೈಷ್ಣವಾಗ್ರೇಸರರಂಘ್ರಿ ।
ತ್ರುಟಿಯಾದರೂ ಸೋಕಲು ಗತಿಗೆ ದಾರಿ । ೩ ।
ಧ್ಯಾನಕ್ಕೆ ಸಿಲುಕವನೆ ನಿನ್ನ ಕಾಣಲಿಬಹುದು ।
ಜ್ಞಾನಿಗಳು ಎಂತು ಬರುವರೊ ಅಲ್ಲಿಗೆ ।
ಅನಂತಜನುಮದಲ್ಲಿ ಜಪ ತಪ ಹೋಮ ವ್ರತ ।
ಏನೇನು ಮಾಡಿದರೂ ಇಷ್ಟು ಜನ ಕೊಡುವದೆ । ೪ ।
ನೀನಿದ್ದ ಸ್ಥಾನದಲಿ ಸಕಲ ಪುಣ್ಯಕ್ಷೇತ್ರ ।
ನೀನಿದ್ದ ಸ್ಥಾನದಲಿ ಸರ್ವತೀರ್ಥ ।
ನೀನಿದ್ದ ಸ್ಥಾನದಲಿ ಸಮಸ್ತ ತಾತ್ವಿಕರು ।
ನಾನಿತ್ತ ಬರುವುದು ನಿನಗೆ ತಿಳಿಯದು ಸ್ವಾಮಿ । ೫ ।

ಇದನೆ ಲಾಲಿಸು ಜೀಯಾ ನಿನ್ನದೊಂದೇಮೂರ್ತಿ ।
ನಿದರ್ಶನವಲ್ಲದೆ ಮಿಗಿಲಾವುದೋ ।
ಪದೇ ಪದೇ ಮಧ್ವಮತವ ಪೊಂದಿದ ಸುಜನರ ।

ಹೃದಯದೊಳಗನಂತ ಪರಿ ನಿನ್ನ ರೂಪಗಳು । ೬ ।

ಭಳಿರೆ ತಿರುಮಲರಾಯ ನಿನ್ನ ಕರುಣಾರಸಕೆ ।
ನೆಲೆಗಾಣೆ ನೆಲೆಗಾಣೆ ನೆರೆಹೊರೆಯೊಳು ।
ಒಲಿದು ಭಕುತರಿಗಾಗಿ ಮದುವೆ ಹಮ್ಮಿಕೊಂಡೆ ।
ಸುಲಭ ದೇವರ ದೇವ ವಿಜಯವಿಠಲ ವೇಂಕಟಾ । ೭ ।

----------------------------------------

ರಾಗ – ವರಾಳಿ ತಾಳ – ಆದಿತಾಳ

ಎಂತು ನಿನ್ನ ಮೆಚ್ಚಿಸುವೆನೋ ಎಲೋ ವೇಂಕಟಾ
ಸಂತತ ಬಿಡದೆ ಎನ್ನ ಅಂತರಂಗದಲ್ಲಿ ಇರೋ । ಪ ।
ಕುಣಿದು ನಿನ್ನ ಮೆಚ್ಚಿಸುವೆನೆ ಫಣಿಹಾರ ತ್ರಿನಯನ ಜನಕಾ ।
ಮಣಿದು ನಿನ್ನ ಮೆಚ್ಚಿಸುವೆನೆ ಸನಕಾದಿಗಳ ಸುಪ್ರೇಮಾ । ೧ ।
ಅನ್ನವಿತ್ತು ಮೆಚ್ಚಿಸುವೆನೆ ಘನ್ನ ನಿತ್ಯತೃಪ್ತ ನೀನು ।
ಹೆಣ್ಣನಿತ್ತು ಮೆಚ್ಚಿಸುವೆನೆ ಹೆಣ್ಣು ರೂಪ ನೀನೇ ಸ್ವಾಮಿ । ೨ ।
ಅಪ್ಪಾಯೆಂದು ಮೆಚ್ಚಿಸುವೆನೆ ದರ್ಪಕ ಬೊಮ್ಮರ ತಂದೆ ।
ಅಪ್ಪ ನಿನ್ನ ಮೆಚ್ಚಿಸುವೆನೆ ಸುಪ್ಪಾಣಿರಮೆಯರಸಾ । ೩ ।
ಪಾಲುಕುಡಿಸಿ ಮೆಚ್ಚಿಸುವೆನೆ ಪಾಲಸಾಗರಸದನ ನೀನು ।
ಮಾಲೆ ಹಾಕಿ ಮೆಚ್ಚಿಸುವೆನೆ ಮಾಲೆ ಕೌಸ್ತುಭಭೂಷಣಾ । ೪ ।
ಸೇವೆ ಮಾಡಿ ಮೆಚ್ಚಿಸುವೆನೆ ಪಾವಮಾನಿ ತಾತ ನೀನು ।
ಆವುದೂ ಕಾಣೆನೋ ಎನ್ನ ಕಾವುದು ವಿಜಯವಿಠಲ । ೫ ।

----------------------------------------

ರಾಗ – ಭೂಪಾಳಿ ತಾಳ – ಝಂಪೆ ತಾಳ

ವೆಂಕಟಾಚಲನಿಲಯ ಎನ್ನ ಒಡೆಯಾ ।
ವೆಂಕಟಾಚಲನಿಲಯಾ ವಿಧಾತೃ ಸಂತರೊಡಿಯ ।
ಪಂಕಜಮುಖಿರಮಣ ಪಾವನಚರಣಾ । ಪ ।

ಉದಯವಾಗದ ಮುನ್ನೆ ಉದರ ಪೋಷಣ ಚಿಂತೆ ।
ಅದರ ಮೇಲೆ ಧಾನ್ಯಧನದ ಚಿಂತೆ ।
ಮದನ ಯೌವ್ವನದ ಚಿಂತೆ ಮತ್ತಸತ್ವದ ಚಿಂತೆ ।
ಹೃದಯದಲಿ ನಿಮ್ಮ ಚಿಂತೆಯನು ಮಾಡದೆಲೆ ಕಟ್ಟೆ । ೧ ।

ಮಂದಗಮನೆಯರಾಶೆ ಮೇದಿನಿ ಆಳುವ ಆಶೆ ।
ನಂದನರ ಆಶೆ ನಾನಾ ಆಶೆಯು ।
ಬಂಧು ಬಳಗದ ಆಶೆ ಭಾಗ್ಯವುಳ್ಳವರಾಶೆ ।
ಒಂದು ದಿನ ನಿಮ್ಮಾಶೆಯನು ಮಾಡದೆಲೆ ಕೆಟ್ಟೆ । ೨ ।

ಎದುರು ಇಲ್ಲವೆಂಬೊ ಗರ್ವ ಎದೆಯ ಬಿಗುವಿನ ಗರ್ವ ।
ವದನ ನಿಷ್ಟುರ ಗರ್ವ ವಿದ್ಯಾ ಗರ್ವವು ।
ಉದಧಿಶಯನ ನಮ್ಮ ವಿಜಯವಿಠಲರೇಯ ।
ಮದಗರ್ವದಿಂದ ನಿನ್ನ ನೆನಹು ಮಾಡದೆ ಕೆಟ್ಟೆ । ೩ ।

---

ರಾಗ – ಸಾವೇರಿ ತಾಳ – ಝಂಪೆ

ಹದಿನಾಲ್ಕು ಲೋಕವನಾಳುವ ತಂದೆಗೆ ।
ಮುದದಿಂದ ನಾನೊಬ್ಬ ಭಾರವಾದೆನೆ । ಪ ।

ಸುರಗಿರಿಯು ಶರಧಿಯೊಳು ಕಡೆವಾಗ ಮುಣುಗಲು ।

ಭರದಿಂದ ಪೋಗಿ ಬೆನ್ನಾಂತು ಪೊತ್ತೆ ।
ಧರಣಿಯು ಮೊರೆಯಿಡಲು ತೆರಳಲ್ಲಿ ಬಂದು ।
ಭೂತರುಣಿಯನು ಸೆರೆಬಡಿಸಿ ಉಳುಹಿಕೊಳ್ಳಲಿಲ್ಲವೆ । ೧ ।



ಸುರಪತಿಮುನಿದೇಳು ಹಗಲಿರುಳು ಮಳೆಗರೆಯೆ ।
ಬೆರಳಲ್ಲಿ ಧರಿಸಿ ತುರುಗಳ ಕಾಯ್ದೆ ।
ವರಮುನಿ ಆಶನವನು ಬೇಡಲು ಬೆದರಿ ನರ ।
ನರಸಿ ನಿನ್ನ ಕರೆಯೆ ಕರುಣದಲಿ ಪಾಲಿಸಿದೆ । ೨ ।

ಜಲಜಾಕ್ಷ ಬೆಟ್ಟವನು ಪೊತ್ತು ಬಳಲಿದಾಗ ।
ಸಲಹಬೇಕೆಂದು ಬೇಸರಿಸಲಿಲ್ಲಾ ।
ಸುಲಭದಲಿ ಶೇಷಾಚಲವಾಸನಾಗಿಪ್ಪ ।
ಒಲಿದೆನ್ನ ರಕ್ಷಿಸೋ ವಿಜಯವಿಠಲನೆ । ೩ ।

---

ರಾಗ – ಪಂತುವರಾಳಿ ತಾಳ – ಆದಿತಾಳ
ಬಾಬಾ ಭಕುತರ ಹೃದಯಮಂದಿರಾ ।
ಬಾಬಾ ಜಗದೋದ್ಧಾರ ।
ಬಾಬಾ ವೇಂಕಟಾಚಲವಿಹಾರ ।
ಬಾಬಾನೇಕವತಾರಾ । ಪ ।
ದಕ್ಷ ಕಮಲಾಕ್ಷ ರಾಕ್ಷಸಕುಲಶಿಕ್ಷ
ಲಕ್ಷ್ಮಣಾಗ್ರಜ ಲಕ್ಷ್ಮೀವಕ್ಷ
ಪಕ್ಷಿವಾಹನ ಪೂರ್ಣಲಕ್ಷಣ ಸರ್ವೇಶಾ
ಮೋಕ್ಷದಾಯಕ ಪಾಂಡವಪಕ್ಷಾ ।
ಅಕ್ಷಯವಂತ ಸೂಕ್ಷ್ಮಾಂಬರವಾಸಾ–
ಧ್ಯಕ್ಷ ಪ್ರತ್ಯಕ್ಷಾದಿದೈವಾ
ಅಕ್ಷತನಾರೇರ ತೀಕ್ಷಣದಲಿ ತಂದ
ಅಕ್ಷರಪುರುಷ ಗೋವಿಂದಾ । ೧ ।

ಜಾಂಬೂನದಾಂಬರ ಸಾಂಬಜನಕ ನೀ–

ಲಾಂಬುದವರ್ಣಾ ಸುವರ್ಣಾ
ಸಾಂಬವಿನುತ ಗುಣಾಂಬುಧೆ ನಾನಾವಿ-
ಡಂಭನ ತೋರಿದ ಮಹಿಮಾ
ಕಾಂಬೆನೋ ನಿನ್ನ ಚರಣಾಂಬುಜ ಮನದೊಳು
ಜಾಂಬವಂತರ ಪರಿಪಾಲಾವಿ-
ಶ್ವಂಭರ ಅಂಬರಮಣಿಯ ಪಡೆದರು -
ತುಂಬರ ಶಂಬರಶಾಯಿ । ೨ ।

ಬಂಗಾರ ರಥದೊಳು ಶೃಂಗಾರವಾದ ಶ್ರೀ-
ಮಂಗಳಾಂಗ ಕಾಳಿಂಗ-
ಭೃಂಗಾ ನರಸಿಂಗಾನಂಗಜನಕ-
ರಥಾಂಗ ಶಾಂಘಪಾಣಿ ।
ಸಂಗ ನಿಸ್ಸಂಗ ವಿಹಂಗ ಮಾತಂಗ ।
ರಂಗನಾಯಕ ಪರಿಪಾಲ
ಸಂಗೀತಲೋಲ ಗೋಪಾಂಗನೆಯರ
ಅಂತರಂಗ ಸಂತಾಪವಿದೂರ । ೩ ।

ತಾಳ ಜಾಗಟೆ ಮದ್ದಳೆ ದುಂದುಭಿ ಭೇರಿ ।
ಕಾಳೆ ಹೆಗ್ಗಾಳೆ ತಮ್ಮಟೆ ನಿ-
ಸ್ಸಾಳೆ ಪಣವ ತಂಬೂರಿ ಪತಾಕ ಕಂ-
ಸಾಳೆ ತಮ್ಮಟಿ ಕಂಬು ಡಕ್ಕವಾದ್ಯ ।
ಸೋಳ್ಳೈಸುತ್ತಲಿರೆ ಭಾಗವತರ ಸ-
ಮ್ಮೇಳವು ಕುಣಿದೊಲಿದಾಡೆ ।
ಸಾಲು ಪಂಚಿನ ಗುಂಪು ಛತ್ರ ಚಾಮರ ದ್ವಜ-
ದಾಳುಗಳವರೊಪ್ಪಿಹರೋ । ೪ ।

ಚಾರುನಾಮಂಗಳು ಧರಿಸಿದ ದಾಸರು ।
ವೀರಮಾರುತಿಯ ಮತವನು ।
ಸಾರುತ ಸಂತತ ಬೊಮ್ಮಾದಿಗಳನ್ನ ।
ತಾರತಮ್ಯದಿಂದ ತಿಳಿದು

ಭಾರಿ ಭಾರಿ ನಿನ್ನ ಹಾರೈಸಿ ಆನಂದ-
ವಾರಿಧಿಯೊಳು ಮಗ್ನರಾಗಿ ।
ಊರದೇವತೆಗಳ ತಾರರು ಮನಸಿಗೆ
ಸಾರ ಹೃದಯ ನಿಂದಿಹರೋ ।೫।

ಹಿಂದೆ ಬಲೀಂದ್ರನು ಭಕುತಿಲಿ ಇರೇ
ಮಂದಮತಿರಾವಣನು ।
ಬಂದು ಕೆಣಕಲು ನಗುತ ಮಹಾಲೀಲೆ-
ಯಿಂದ ನೀನೇ ಆ ಖಳನ
ಅಂದು ತಡಮಾಡದೆ ಬಲುಯೋಜನವಿರೆ ।
ಹಿಂದಕ್ಕೆ ಬೆರಳಲ್ಲಿ ಒಗದೆ ।
ಇಂದು ನಿನಗೆ ಈ ರಥ ತಡವುವದು ।
ಅಂದವಾಗಿಹದೇನೊ ಹರಿಯೇ ।೬।

ತಡಮಾಡಲಾಗದು ಪೊಡವೀಶ ನಿನಗೀ-
ತಡೆ ಎದುರೆ ಪೊರಟರೆ
ತಡೆವರಿನ್ನಾರಯ್ಯ ಒಡೆಯ ವೇದಾಂತಸಿದ್ದ
ಕಡೆಗಣ್ಣಿಂದ ನೋಡದಲೆ
ನಡಿವದು ನುಡಿವದು ಅಡಿಗಡಿಗೆ ನೀನೆ
ಬಿಡದೆ ಹೊರಗೊಳಗಿದ್ದು
ಸಡಗರದ ದೈವವೆ ನುಡಿಪಾಲಿಸುವದು
ಅಡಿಗಡಿಗೆ ಲಾಲಿಸುತಾ ।೭।

ಹಂಸವಾಹನ ಕ್ರತುಧ್ವಂಸಿ ಸುಮನಸೋ-
ತ್ತಂಸ ಕೃಶಾನು ಪಾಪಿಗಳ
ಹಿಂಸೆ ಬದಿಸುವ ಪುಂಸ ರಕ್ಕಸಘಾಸಿ
ಹಂಸವಾಹನ ವಾಯು ಧನಪ ।
ಅಂಶುಮಾಲಿ ಸೋಮ
ಹಂಸಮುನಿ ಅಲ್ಲಲ್ಲೆನಿಂದು ।
ಸಂಸೇವ್ಯ ಮಾಡುತ್ತ ಸಮ್ಮೊವಾಗಿಹರು ।

ಕಂಸಾರಿ ತ್ರಿಗುಣಾತೀತಾ ।೮।

ಹತ್ತಾವತಾರದ ಹರಿಯೆ ಘನಸಿರಿಯೇ ।

ಮತ್ತೊಬ್ಬರನು ಹೀಗೆ ಕರೆಯೆ ।
ಭೃತ್ಯರ ಸಂಗಡ ತಿರುಗುವ ಮರಿಯೆ ಎನ್ನ
ಹತ್ತಿಲಿ ಆಡುವ ದೊರೆಯೆ ।
ಚಿತ್ತದೊಲ್ಲಭ ನಮ್ಮ ವಿಜಯವಿಠಲರೇಯ ।
ಎತ್ತ ನೋಡಲು ನಿನಗೆ ಸರಿಯೆ ।
ಅತ್ತಿತ್ತ ಪೋಗದೆ ಸಾಗಿಬರುವದೋ ಎನೆ
ತ್ತಲು ವೇಂಕಟ ದೊರೆಯೇ ।೯।

By Narahari Sumadhwa
For www.sumadhwaseva.com